ಶ್ರೀ ಬಿ. ಬಸವಲಿಂಗಪ್ಪ.—ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿದ್ದಾಗ ನಾನು ಇನ್‌ಸ್ಪೆಕ್ಷನ್ ಅಂಡ್ ಆಡಿಟ್ ಸೆಲ್ ಮಾಡಿದ್ದೆ. ರಿಪೋರ್ಟ್ ಕಳುಹಿಸಿದ್ದಾರೆ. ಸರಕಾರದವರು ಆ ರಿಪೋರ್ಟ್ಸ್‌ನ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅದೇ ರೀತಿಯಾಗಿ ಈ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಕೂಡಾ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ. ಸಮಾಧಾನ ಆಯಿತೇ.

## ಸೇಡಂ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯದ ಕಾರ್ಯಕ್ರಮಗಳಲ್ಲಿ ದುರುಪಯೋಗ

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡು).—ಮಾನ್ಯ ಅರಣ್ಯ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಇಲಾಖೆಯವರು ಸಸಿ ಮಡಿಗಳನ್ನು ಮಾಡಿ ಅದರಲ್ಲಿ ಹಣ ದುರುಪಯೋಗ ಪಡಿಸಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಸೇಡಂ ತಾಲ್ಲೂಕಿನಲ್ಲಿ ಒಟ್ಟು ನರ್ಸರಿಗಳು ಎಷ್ಟು ? ಅವು ಯಾವ ಯಾವ ಸ್ಥಳಗಳಲ್ಲಿವೆ, ಮತ್ತು ಸಸಿ ಮಡಿಗಳಲ್ಲಿ ಇರುವ ಸಸಿಗಳು ಎಷ್ಟು ?

ಇ) ಈ ನರ್ಸರಿಗಳಲ್ಲಿರುವ ಮಹಿಳಾ ಹಾಗೂ ಪುರುಷ ಕೂಲಿಕಾರರ ಸಂಖ್ಯೆ ಎಷ್ಟು ? ಹಾಗೂ ಅವರ ದಿನಗೂಲಿ ಎಷ್ಟು ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಸಚಿವರು).—

ಅ) ಇಲ್ಲ.

ಆ) ೧೯೮೯-೯೦ನೇ ಸಾಲಿನಲ್ಲಿ ಸೇಡಂ ತಾಲ್ಲೂಕಿನಲ್ಲಿ ೪ ಸ್ಥಳಗಳಲ್ಲಿ ೯ ನರ್ಸರಿಗಳಿರುತ್ತವೆ. ಅವುಗಳೆಂದರೆ : ೧) ಗುಂಡಪಲ್ಲಿ ೨) ಮೋತಕಪಲ್ಲಿ ೩) ಗರ್ಡಾನ ಮತ್ತು ೪) ಲಿಂಗಂಪಲ್ಲಿ. ಮೇಲ್ಕಂಡ ಸ್ಥಳಗಳಲ್ಲಿ ಸಸಿ ಮಡಿ ಮತ್ತು ಪಿಬಿಎಸ್‌ಗಳ ಸಂಖ್ಯೆ ಈ ಕೆಳಕಂಡಂತಿದೆ.

| | | | |
|---|---|---|---|
| ೧) | ಗುಂಡೆಪಲ್ಲಿ (ಕೆ) | ೩೦೦೦೦ ಪಿಬಿಎಸ್ | ೫ : ೮ |
| ೨) | ಗುಂಡೆಪಲ್ಲಿ (ಕೆ) | ೧೦೦೦೦ ,, | ೮ : ೧೨ |
| ೩) | ಮೋತಕಪಲ್ಲಿ | ೨೦೦೦೦ ,, | ೫ : ೮ |
| ೪) | ಗರ್ಡಾನ | ೫೦೦೦೦ ,, | ೫ : ೮ |
| ೫) | ಮೋತಕಪಲ್ಲಿ | ೭೦೦೦೦ ,, | ೫ : ೮ |
| ೬) | ಮೋತಕಪಲ್ಲಿ | ೧೦೦೮೮೦ ,, | ೫ : ೮ |
| ೭) | ಗರ್ಡಾನ | ೫೦೦೦೦ ,, | ೫ : ೮ |
| ೮) | ಲಿಂಗಂಪಲ್ಲಿ | ೩೦ ಸಸಿ ಮಡಿ | |
| ೯) | ಗರ್ಡಾನ | ೭೦ ಸಸಿ ಮಡಿ | |

ಇ) ಈ ನರ್ಸರಿಗಳಲ್ಲಿ ೩೫ ಮಹಿಳೆ ಮತ್ತು ೨ ಪುರುಷ ಕೂಲಿಕಾರರು ಇರುತ್ತಾರೆ. ಅವರಿಗೆ ದಿನಕ್ಕೆ ರೂ. ೧೪.೫೦ರಂತೆ ಇಲಾಖೆ ಯೋಜನೆ ಶೀರ್ಷಿಕೆ ಅಡಿಯಲ್ಲಿ ಮತ್ತು ೧೨ ರೂ.ಗಳಂತೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮದ (ಜವಾಹರ್ ರೋಜಗಾರ್ ಯೋಜನೆ) ಡಿಯಲ್ಲಿ ಶೀರ್ಷಿಕೆಯಲ್ಲಿ ಕೊಡಲಾಗುತ್ತಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಈ ಪ್ರಶ್ನೆಗಳಿಗೆ ಇಲಾಖೆಯವರು ತಮಗೆ ಅನುಕೂಲವಾಗುವ ಉತ್ತರ ನೀಡಿದ್ದಾರೆ. 'ಅ' ಪ್ರಶ್ನೆಗೆ ಇಲ್ಲ ಎಂದು ಉತ್ತರ ನೀಡಿದ್ದಾರೆ, ಏತಕ್ಕೆ ? 'ಇ' ಪ್ರಶ್ನೆಯಲ್ಲಿ ಯಾವ ಯಾವ ನರ್ಸರಿಗಳಲ್ಲಿ ಎಷ್ಟೆಷ್ಟು ಕೂಲಿಕಾರರು ಇದ್ದಾರೆ, ಆ ಸಂಖ್ಯೆಯ ವಿವರ ಕೊಡಿ ಎಂದು ಕೇಳಿದ್ದೆ. ಆದರೆ ಅವರು ಎಲ್ಲಾ ನರ್ಸರಿಗಳನ್ನು ಒಟ್ಟು ಮಾಡಿ ಅದರಲ್ಲಿರುವ ಕೂಲಿಕಾರರ ಸಂಖ್ಯೆಯನ್ನು ತೋರಿಸಿದ್ದಾರೆ. ನನಗೆ ಈ ನರ್ಸರಿಗಳಲ್ಲಿ ಕೆಲಸ ಮಾಡತಕ್ಕ ಕೂಲಿಕಾರರ ಮಾಹಿತಿಯನ್ನು ತಿಳಿಸಬಾರದೆಂಬ ಉದ್ದೇಶ ಇದೆ ಎಂದು ಆರ್ಥವಾಗುತ್ತದೆ. ಎರಡನೆಯದಾಗಿ ಮಾನ್ಯ ಅಧ್ಯಕ್ಷರೇ ಈ ಉತ್ತರದಲ್ಲಿ ರೂಪಾಯಿ ೧೪-೫೦ ಮತ್ತು ೧೨-೦೦ರೂಪಾಯಿ ದಿನಗೂಲಿ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ನಾನು ದಿನಾಂಕ ೧೮-೨-೯೦ರಂದು ಗರ್ಡಾನ

ಮತ್ತು ಲಿಂಗಂಪಲ್ಲಿಗೆ ಹೋಗಿ ಅಲ್ಲಿನ ಕೂಲಿಗಾರರಾದ ಭೀಮಮ್ಮ, ಮೆಹಬೂಬಿ, ಮೊಗಲಮ್ಮ, ಗೋಪಾಲ್ ಮುಂತಾದವರನ್ನು ನಿಮಗೆ ಇಲ್ಲಿ ಎಷ್ಟು ಕೂಲಿ ಕೊಡುತ್ತಿದ್ದಾರೆಂದು ಕೇಳಿದ್ದಕ್ಕೆ ಅವರು ಹೇಳಿದರು ೫ ರೂಪಾಯಿ ಕೂಲಿಯನ್ನು ಮಾತ್ರ ಕೊಡಲಾಗುತ್ತಿದೆ ಎಂದು, ಈ ಪ್ರಕಾರವಾಗಿ ಅಲ್ಲಿ ಹಣ ದುರುಪಯೋಗವಾಗುತ್ತಿದೆ. ನನ್ನ ಮೊದಲನೆಯ ಪ್ರಶ್ನೆಗೆ ಅವರು ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಸಾಮಾಜಿಕ ಆಡಿಟ್ ಇಲಾಖೆಯವರು ಸಹಿ ಮಾಡಿಗಳನ್ನು ಮಾಡಿ ಹಣ ದುರುಪಯೋಗ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ತಿಳಿಸಿದ್ದಾರೆ. ಈ ಪ್ರಕಾರ ೧೪–೫೦ ಪೈಸೆ ಕೊಡುವ ಬದಲು ಅವರಿಗೆ ಕೂಲಿ ಕೇವಲ ೫ ರೂಪಾಯಿ ಮಾತ್ರ ಒಂದು ದಿನಕ್ಕೆ ಕೊಡುತ್ತಿದ್ದಾರೆ. ಇದು ದುರುಪಯೋಗ ಅಲ್ಲವೆ ? ಈ ಬಗ್ಗೆ ತನಿಖೆ ಏತಕ್ಕೆ ಮಾಡಿಸಬಾರದು. ಇನ್ನು ಮಾನ್ಯ ಅಧ್ಯಕ್ಷರೇ ನನ್ನ (ಇ) ಪ್ರಶ್ನೆಗೆ ಮತ್ತು (ಆ) ಪ್ರಶ್ನೆಗೆ...

ಅಧ್ಯಕ್ಷರು.—ಮೊದಲು ನಿಮ್ಮ (ಇ) ಪ್ರಶ್ನೆಗೆ ಉತ್ತರ ಬರಲಿ ಆ ಮೇಲೆ ನಿಮ್ಮ (ಆ) ಪ್ರಶ್ನೆ ಕೇಳಿ.

ಶ್ರೀ ಬಿ. ಬಸವಲಿಂಗಪ್ಪ —ಮಾನ್ಯ ಅಧ್ಯಕ್ಷರೇ ನಾನು ಈಗತಾನೇ ಮಾನ್ಯ ಸದಸ್ಯರಾದ ಶ್ರೀಮಾನ್ ಸಿಂಧ್ಯಾರವರಿಗೆ ಉತ್ತರ ಹೇಳುತ್ತಾ ಹೇಳಿದ್ದೇನೆ. ಅವರ ತಾಲ್ಲೂಕಿನಲ್ಲಿ ೫ ರೂಪಾಯಿ ಕೂಲಿ ಕೊಡುತ್ತಿದ್ದಾರೆಂದು ಹೇಳಿದ್ದಾರೆ. ಆ ಬಗ್ಗೆ ತನಿಖೆ ಮಾಡಲೇಬೇಕಲ್ಲ. ಅವರು ಹೇಳಿದ ವಿಷಯವನ್ನು ನಾನು ನಂಬಿದ್ದೇನೆ. ಮಾನ್ಯ ಸದಸ್ಯರ ತಾಲ್ಲೂಕಿನಲ್ಲಿ ಏನೇನು ವ್ಯವಹಾರಗಳು ನಡೆಯುತ್ತವೆ ಎನ್ನುವುದು ಅವರಿಗೆ ಚೆನ್ನಾಗಿ ಗೊತ್ತಿದೆ. ನಾನು ಒಪ್ಪಿಕೊಳ್ಳುತ್ತೇನೆ. ಜೊತೆಗೆ ಅವರಿಗೆ ಮನವರಿಕೆ ಮಾಡಿಕೊಡಬೇಕಾದರೆ ನಾವು ತನಿಖೆ ಮಾಡಲೇಬೇಕು. ಅದಕ್ಕೆ ನಾನು ಹೇಳಿದ ಇನ್ಸ್‌ಪೆಕ್ಷನ್ ಅಂಡ್ ಆಡಿಟ್ ಸೆಲ್ ಮಾಡುತ್ತೇನೆ. ಅವರು ಇದನ್ನೆಲ್ಲಾ ತನಿಖೆ ಮಾಡುತ್ತಾರೆ.

ಅಧ್ಯಕ್ಷರು.—ಮಾನ್ಯ ಮೋತಕಪಲ್ಲಿಯವರೇ, ತಾವು ಈಗ ತಮ್ಮ (ಆ) ಪ್ರಶ್ನೆ ಕೇಳಿ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ,—ಮಾನ್ಯ ಅಧ್ಯಕ್ಷರೇ ನಿಯಮಗಳ ಪ್ರಕಾರ ಏತಕ್ಕೆ ಸಿ.ಓ.ಡಿ. ತನಿಖೆ ಮಾಡಿಸಬಾರದು ? ಅಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ.

ಶ್ರೀ ಬಿ. ಬಸವಲಿಂಗಪ್ಪ.—ಸಿ.ಓ.ಡಿ ತನಿಖೆ ಒಂದೇ ತಾಲ್ಲೂಕಿಗೆ ಮಾಡಿಸಲು ಸಾಧ್ಯವಾಗುವುದಿಲ್ಲ. ೧೭೫ ತಾಲ್ಲೂಕುಗಳಲ್ಲೂ ಮಾಡಿಸಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ ಎಲ್ಲಾ ಕಡೆ ಈ ರೀತಿ ಆಗಿದೆ ಎಂದು ಹೇಳುತ್ತಾರೆ. ಆದ್ದರಿಂದ ಒಂದು ತಾಲ್ಲೂಕಿನಲ್ಲಿ ಮಾತ್ರ ಸಿ.ಓ.ಡಿ. ತನಿಖೆ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಇನ್ಸ್‌ಪೆಕ್ಷನ್ ಅಂಡ್ ಆಡಿಟ್ ಸೆಲ್ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಎಲ್ಲಾ ಕಡೆ ಮಾಡಿಸಿ.

ಅಧ್ಯಕ್ಷರು.—ಅವರು ಎಲ್ಲಾ ಕಡೆ ಮಾಡಿಸಿ ಎಂದು ಕೇಳುತ್ತಿದ್ದಾರೆ ;

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ನೇರವಾಗಿ ಆಪಾದನೆ ಮಾಡಿದ್ದಾರೆ ಹಣ ದುರುಪಯೋಗ ಇಂತಹ ಕಡೆ ಆಗಿದೆ ಎಂದು. ಅವರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಿರ್ದಿಷ್ಟವಾದ ಆಪಾದನೆ ಇರುವಾಗ ಸಿ.ಓ.ಡಿ. ತನಿಖೆ ಏತಕ್ಕೆ ಮಾಡಿಸಬಾರದು ಎಂದು ಕೇಳುತ್ತಿದ್ದಾರೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಪುನಃ ನಿಮ್ಮ (ಇ) ಪ್ರಶ್ನೆಗೆ ಹೋದಿರಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಅವರ ಕ್ಷೇತ್ರದಲ್ಲಿ ಹಣ ದುರುಪಯೋಗ ಆಗಿದೆ ; ಅಲ್ಲಿ ವಿಚಾರಣೆ ಮಾಡಿಸಬೇಕು ಎಂದು ಹೇಳಿದ್ದಾರೆ. ನಾನು ವಿಚಾರ ಮಾಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಈ ಸಾಮಾಜಿಕ ಆಡಿಟ್ ಯೋಜನೆಯಲ್ಲಿ ಹಣ ದುರುಪಯೋಗ ಆಗುತ್ತಿರುವುದು ನೂರಕ್ಕೆ ನೂರರಷ್ಟು ಸತ್ಯ. ನನ್ನ ಹಾಸನ ಕ್ಷೇತ್ರದಲ್ಲಿ ಒಂದು ಪ್ರಕರಣ ಪತ್ತೆ ಮಾಡಿ ಮಾನ್ಯ ಸಚಿವರಿಗೂ ಮತ್ತು ಅಲ್ಲಿನ ಡಿ.ಎಫ್.ಓ.ಗೆ ಆಜ್ಞೆ ಕೊಟ್ಟೆ. ಅಲ್ಲಿ ೧೪ ರೂಪಾಯಿಗಳಿಗೆ ಬದಲಾಗಿ ೨೬ ರೂಪಾಯಿ ಕೂಲಿ ಕೊಡುತ್ತಿದ್ದರು. ಆ ಮೇಲೆ ಲೇಬರ್ಸ್ ೧೦–೧೨ ಜನ ಕೆಲಸಕ್ಕೆ ಬಂದಿದ್ದರೆ ೩೫ ದಿನ ೬ ದಿನ ಕೆಲಸ ಮಾಡಿದ್ದು ತೋರಿಸಿ ಸಾವಿರಾರು ರೂಪಾಯಿಗಳವರೆಗೆ ಹಣ ದುರುಪಯೋಗ ಮಾಡಿರುವುದನ್ನು ನಾನು ಪತ್ತೆ ಮಾಡಿ ಸರ್ಕಾರಕ್ಕೆ ಮತ್ತು ಡಿ.ಎಫ್.ಓ.ಗೆ ಆಜ್ಞೆ ಕೊಟ್ಟಿದ್ದೇನೆ. ಆದರೂ ಇನ್ನುವರೆವಿಗೂ ಆಕ್ಷನ್ ತೆಗೆದುಕೊಂಡಿಲ್ಲ. ಹಣ ಖರ್ಚು ಮಾಡಿದ ಮೇಲೆ ಕೆಲಸದ ಪ್ರಗತಿ ಕೂಡ ಪರಿಶೀಲನೆ ಮಾಡಬೇಕಾಗುತ್ತದೆ. ಎಷ್ಟು ಹಣ ಖರ್ಚು ಮಾಡುತ್ತೇವೆಯೋ ಅದರ ಕೆಲಸದ ಪ್ರೊಗ್ರೆಸ್ ನೋಡಬೇಕಾಗುತ್ತದೆ. ನೀವು ಅಲ್ಲಿಗೆ ಯಾರನ್ನಾದರೂ ವಿಸಿಟ್ ಮಾಡಿಸಿ

ಕಳುಹಿಸಿಕೊಡುತ್ತೀರಿ. ಅವರು ಸಹ ದುಡ್ಡು ತೆಗೆದುಕೊಂಡು ಸರಿ ಇದೆ ಎಂದು ಬರೆದುಕೊಂಡು ಬರುತ್ತಾರೆ. ಇದು ಬಹಳ ನಾಚಿಕೆಗೇಡಿನ ಕೆಲಸ. ಈ ರೀತಿ ಆಗಬಾರದು.

ಅಧ್ಯಕ್ಷರು.—ಶ್ರೀ ಎಲ್. ಆರ್. ಶಿವರಾಮೇಗೌಡರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸಮಯ ಕೇಳಿರುವುದರಿಂದ ಮುಂದಿನ ಬುಧುವಾರ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧಿವೇಶನ ನಡೆಯುವುದಕ್ಕೆ ಪ್ರಾರಂಭವಾಗಿ ೧೪ ದಿವಸ ಆಯಿತು. ಇಷ್ಟು ಅವಧಿಯೊಳಗೆ ನನ್ನ ೮ ಪ್ರಶ್ನೆಗಳು ತಡೆಹಿಡಿಯಲಾಗಿದೆ, ಈಗ ನಾನು ಕೇಳಿರತಕ್ಕ ಪ್ರಶ್ನೆ ದೊಡ್ಡದಾಗಿದೆ. ಉಳಿದ ಪ್ರಶ್ನೆಗಳು ಚಿಕ್ಕದಾಗಿದ್ದರೂ ತಡೆಹಿಡಿಯಲಾಗಿದೆ. ಇದಕ್ಕೆ ಕಾರಣ ವೇನು ?

ಅಧ್ಯಕ್ಷರು.—ಈಗ ಶ್ರೀ ಪಿ. ಸಿ. ಸಿದ್ದನಗೌಡರ ಪ್ರಶ್ನೆ.

## ಜಿಲ್ಲಾ ಪರಿಷತ್ತುಗಳಿಂದಾದ ನಿರ್ಣಯಂಗಳ ಬಗ್ಗೆ

೯೬೧ ಶ್ರೀ ವಿ. ಸಿ. ಸಿದ್ದನಗೌಡರ್(ಕಲಘಟಗಿ).—ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಾರ್ತಾ ಹಾಗೂ ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ರಾಜ್ಯದ ಎಷ್ಟು ಜಿಲ್ಲಾಪರಿಷತ್ತುಗಳು ಕೆಟ್ಟಿರುವ ರಸ್ತೆಗಳನ್ನು ದುರಸ್ತಿಮಾಡಲು ಸಾಕಷ್ಟು ಹಣವಿಲ್ಲವೆಂದು ಸರ್ಕಾರದವರೇ ಈ ರಸ್ತೆಗಳ ದುರಸ್ತಿ ಮಾಡಬೇಕೆಂದು ನಿರ್ಣಯಗಳನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿವೆ ? (ಜಿಲ್ಲಾಪರಿಷತ್ತುಗಳ ಹೆಸರುಗಳ ಬಗ್ಗೆ ವಿವರ ಕೊಡುವುದು)

(ಆ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಾರ್ತಾ ಹಾಗೂ ಪ್ರಚಾರ ಮಂತ್ರಿಗಳು).—

(ಅ) ಯಾವುದು ಇಲ್ಲ;

(ಆ) ಉದ್ಭವಿಸುವುದಿಲ್ಲ.

ಶ್ರೀ ಪಿ. ಸಿ. ಸಿದ್ದನಗೌಡರ್.—ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಪ್ರಶ್ನೆ ಬಹಳ ಪ್ರಾಮುಖ್ಯವಾಗಿದೆ, ಆದರೆ ಸನ್ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ "ಯಾವುದೂ ಇಲ್ಲ" ಉದ್ಭವಿಸುವುದಿಲ್ಲ ವೆಂದು ಉತ್ತರ ಹೇಳಿದ್ದಾರೆ. ಇಲ್ಲಿ ಪ್ರಶ್ನೆ ಏನೆಂದರೆ, ಧಾರವಾಡ ಜಿಲ್ಲಾಪರಿಷತ್ತಿನಲ್ಲಿ ಒಂದು ರೆಸೆಲ್ಯೂಷನ್ ಮಾಡಿ ಸವಣೂರು ರಸ್ತೆಯನ್ನು ಪಿ.ಡಬ್ಲ್ಯೂ.ಡಿ.ಗೆ ಬಿಟ್ಟುಕೊಡುತ್ತೇವೆಂದು ಹೇಳಿದ್ದಾರೆ. ಜಿಲ್ಲಾಪರಿಷತ್ತಿನಲ್ಲಿ ರಸ್ತೆಗಳನ್ನು ರಿಪೇರಿ ಮಾಡಿಸುವುದಕ್ಕೆ ಹಣ ಇಲ್ಲದೇ ಇರುವುದರಿಂದ ಧಾರವಾಡ ಜಿಲ್ಲೆಯಲ್ಲಿರುವ ಸವಣೂರು ರಸ್ತೆಯನ್ನು ಪಿ.ಡಬ್ಲ್ಯೂ.ಡಿ. ಯವರು ತೆಗೆದುಕೊಳ್ಳ ಬೇಕೆಂದು ನಿರ್ಣಯ ಮಾಡಲಾಗಿದೆ, ಈ ರಸ್ತೆಯು ೩೦ ಕಿಲೋಮೀಟರ್ ಉದ್ದ ಇದೆ. ಈ ರಸ್ತೆ ಸರಿಯಿಲ್ಲ ಎನ್ನುವ ಕಾರಣಕ್ಕಾಗಿ ಧಾರವಾಡ ಜಿಲ್ಲೆಯ ಬಸ್‌ಗಳವರು ಸ್ಟ್ರೈಕ್ ಕೂಡ ಮಾಡಿದರು. ಆ ರಸ್ತೆಯಲ್ಲಿ ಒಂದು ಚಕ್ಕಡಿ ಗಾಡಿಯಲ್ಲಿ ಪೇಷಂಟನ್ನು ಹಾಕಿಕೊಂಡು ಬಂದರೆ ಹಾಸ್ಪಿಟಲ್ ಮುಟ್ಟುವ ಹಾಗೇ ಇಲ್ಲ. ಅಲ್ಲೇ ಹೋಗಿಬಿಡುತ್ತಾರೆ. ತಾಲ್ಲೂಕು ಮಟ್ಟದ ರಸ್ತೆಗಳು ಮತ್ತು ಡಿಸ್ಟ್ರಿಕ್ಟ್ ಮಟ್ಟದ ರೋಡ್‌ಗಳನ್ನು ಜಿಲ್ಲಾಪರಿಷತ್ತಿನವರು ದುರಸ್ತಿ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಮಾನ್ಯ ಮಂತ್ರಿಯವರು ಕಂಡು ಹಿಡಿಯಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಬಗ್ಗೆ ಜಿಲ್ಲಾಪರಿಷತ್ತಿನಲ್ಲಿ ನಿರ್ಣಯ ಮಾಡಿಲ್ಲ. ಸರ್ಕಾರದವರೇ ಈ ರೋಡ್‌ಗಳ ಮೇನ್‌ಟಿನೆನ್ಸ್ ಮಾಡಿಕೊಳ್ಳಬೇಕೆಂದು ಅವರು ನಿರ್ಣಯ ಮಾಡಿಲ್ಲ. ಆದರೆ ಇಲ್ಲಿ ಪ್ರಶ್ನೆ ಏನಿದೆ ಎಂದರೆ, ರೋಡ್ಸ್‌ಗಳ ಮೇನ್‌ಟಿನೆನ್ಸ್‌ನಲ್ಲಿ ಬಹಳ ತೊಂದರೆ ಇದೆ. ಇದನ್ನು ನೀವು ಮೂಲಭೂತವಾಗಿ ಆರ್ಥ ಮಾಡಿಕೊಳ್ಳ ಬೇಕು. ಇದು ನಾನ್-ಪ್ಲಾನ್ ಸ್ಕೀಮ್‌ನಲ್ಲಿ ಬರುತ್ತದೆ. ಮತ್ತೆ ಎಷ್ಟು ರಸ್ತೆಗಳನ್ನು ಜಿಲ್ಲಾಪರಿಷತ್ತು ಗಳಿಗೆ ವಹಿಸಿಕೊಟ್ಟಿದ್ದೇವೆಯೋ ಅಷ್ಟರಮಟ್ಟಿಗೆ ಸರ್ಕಾರದವರು ಫಂಡ್ಸ್‌ನ್ನು ಕೊಟ್ಟಿಲ್ಲ. ಆ ಕಾರಣ ದಿಂದ ತೊಂದರೆಯಾಗಿದೆ. ಜವಾಬ್ದಾರಿ ಕೊಟ್ಟ ಪ್ರಮಾಣದಲ್ಲಿ ಫಂಡ್ಸ್‌ನ್ನು ಕೊಡಬೇಕಾಗಿತ್ತು. ಈಗ ಆದರ ಹೊಂದಾಣಿಕೆ ಆಗುವ ರೀತಿಯಲ್ಲಿ ಫಂಡ್ಸ್‌ನ್ನು ಕೊಡುವುದಕ್ಕೆ ನಾವು ತಯಾರಿದ್ದೇವೆ. ಇದರ ಬಗ್ಗೆ ವ್ಯವಸ್ಥೆ ಮಾಡಲಿಕ್ಕೆ ನಮ್ಮ ಹಣಕಾಸಿನ ಮಂತ್ರಿಗಳ ಜೊತೆಗೆ ಚರ್ಚಿಸುತ್ತೇನೆ.